
ಬಿಡುಗಡೆಯಾಗುವ ಯತ್ನದಲ್ಲಿ ರಮೇಶ ಹಲವು ಸಂಕಷ್ಟಗಳ ಸುಳಿಯಲ್ಲಿ ಸಿಕ್ಕು ಬೀಳುತ್ತಾನೆ. ಭೂತಕಾಲದ ಎಲ್ಲ ಬಗೆಯ ಪಾಪಗಳಿಂದ ಮುಕ್ತನಾಗಬೇಕೆಂಬ ಆತನ ಒಳ ಹೋರಾಟವು, ವರ್ತಮಾನ ಸಾಮಾಜದ ಕಣ್ಣಲ್ಲಿ ಭೂತ ಬಡಿದ ವ್ಯಕ್ತಿಯಾಗಿ ಕಂಡು, ಚಿಕಿತ್ಸೆಗೆ ತಾನೇ ಒಳಗಾಗುವ ವ್ಯಂಗ್ಯ ಇಲ್ಲಿದೆ. ಪಾಳೆಗಾರಿಕೆಯ ಸಂಪ್ರದಾಯದ ವಿರುದ್ಧ ರಮೇಶ ನಡೆಸುವ ಹೋರಾಟಕ್ಕೆ ಯಾರ ಬೆಂಬಲವೂ ಇಲ್ಲ. ವಂಶಸ್ಥರ ದಾರಿಯಲ್ಲಿ ನಡೆಯಲು ಸಮಾಜವೇ ಒತ್ತಾಯಿಸುವಂತೆ ಕಾಣುತ್ತದೆ. ಕಥೆಯಲ್ಲಿ ಬರುವ ಮೊಹರಂ ಹಬ್ಬ, ಅಲ್ಲಿ ದೆವ್ವ ಬಡಿಸಿಕೊಂಡವರ ಆಟಗಳು, ಜನರ ಮೊಹರಂ ಕುಣಿತ – ಇವೆಲ್ಲ ಬಾಹ್ಯದಲ್ಲಿ ನಡೆಯುತ್ತಿದ್ದರೆ, ರಮೇಶನ ಆಂತರ್ಯದಲ್ಲಿಯೂ ಅದೇ ಬಗೆಯ ಆಟಗಳು, ಕುಣಿತಗಳು ನಡೆಯುತ್ತಿರುತ್ತವೆ. 'ದುರಸ್ತಿ'ಯ ತಿಮ್ಮ ಮುಕ್ತನಾಗಲು ನಿರ್ಧರಿಸುತ್ತಾನೆ. 'ಭೂತ' ಕಥೆಯ ರಮೇಶನಿಗೆ ಅದೂ ಸಾಧ್ಯವಾಗುವುದಿಲ್ಲ. ವ್ಯಕ್ತಿಯ ಅಸ್ತಿತ್ವದ ಹೋರಾಟ 'ಹಂಗಿನರಮನೆಯ ಹೊರಗೆ' ಕಥೆಯಲ್ಲಿಯೂ ಮುಂದುವರಿಯುತ್ತದೆ.

'ಹಂಗಿನರಮನೆಯ ಹೊರಗೆ' ರಾಜಶೇಖರ ನೀರಮಾನ್ವಿ ಅವರ ಪ್ರಾತಿನಿಧಿಕ ಕಥೆ ಎಂಬಂತೆ ಹಲವು ಕನ್ನಡ ಸಣ್ಣಕಥೆಗಳ ಆಂಥಾಲಜಿಗಳಲ್ಲಿ ಕಾಣಿಸಿಕೊಂಡಿದೆ. ನವ್ಯ ಸಾಹಿತ್ಯ ಸಂದರ್ಭದಲ್ಲಿ ಈ ಕಥೆಗೆ ವಿಶೇಷ ಮನ್ನಣೆ ಸಿಕ್ಕಿದೆ. ಶಂಕರಪ್ಪಗೌಡ (ವೃತ್ತ), ತಿಮ್ಮ (ದುರಸ್ತಿ), ರಮೇಶ (ಭೂತ) ಆಯಾ ಕಥೆಗಳಲ್ಲಿ ಅವರು ಚಲಿಸುತ್ತಿರುತ್ತಾರೆ. ದೈಹಿಕ ಚಲನೆ ಮತ್ತು ಮಾನಸಿಕ ಚಲನೆ ಅಂತರ್‌ಸಂಬಂಧವನ್ನು ಪಡೆದಿವೆ.

'ಹಂಗಿನರಮನೆಯ ಹೊರಗೆ' ಕಥೆಯಲ್ಲಿ ನಾಯಕ (ನಿರೂಪಕ) ಕರುಳು ಬೇನೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿ ಚಲನೆರಹಿತನಾಗಿ ಮಲಗಿರುತ್ತಾನೆ. ಸ್ಥಗಿತ ನಾಯಕನಿಗೆ ಹೆಸರೂ ಇಲ್ಲ. ಮನಸ್ಸು ಚಲಿಸುತ್ತಿರುತ್ತದೆ. ನಾಯಕ ವ್ಯಕ್ತಿಯಾಗಿ ಕುಟುಂಬದಲ್ಲಿ ಅಸ್ತಿತ್ವ ಕಳೆದುಕೊಂಡಿದ್ದಾನೆ. ತಂದೆಯ ಜತೆ ಯಾವ ಬಗೆಯ ಸಂಬಂಧವೂ ಏರ್ಪಡದಷ್ಟು ಕಂದರ ಬೆಳೆದಿದೆ. ಪ್ರೀತಿಸಿ ಕೈ ಹಿಡಿಯಬೇಕೆಂದಿದ್ದ ಕಿರಣಳನ್ನು ನಡುನೀರಿನಲ್ಲಿ ಬಿಟ್ಟುಬಿಟ್ಟಿದ್ದಾನೆ. ಕೈ ಹಿಡಿದ ಹೆಂಡತಿಯನ್ನು ಉಳಿಸಿಕೊಳ್ಳದ ಸ್ಥಿತಿಗೆ ತಲುಪಿದ್ದಾನೆ. ಈ ಎಲ್ಲ ಬಗೆಯ ಸಂಬಂಧಗಳನ್ನು




ಕಳೆದುಕೊಂಡಿರುವುದರಿಂದ ಸಮಾಜದ ಕಣ್ಣಲ್ಲಿ ಅಪರಾಧಿಯಾಗಿ ನಿಲ್ಲುವುದಕ್ಕಿಂತ ತನ್ನ ದೃಷ್ಟಿಯಲ್ಲಿಯೇ ಅಪರಾಧಿಯಾಗಿದ್ದಾನೆ. ಈ ನಾಯಕ ವಿದ್ಯಾವಂತ, ಮಾನವೀಯ ಮೌಲ್ಯಗಳಿಗೆ ಹಂಬಲಿಸುವವನು ಆಗಿದ್ದರೂ ಬದುಕನ್ನು ಕಟ್ಟಿಕೊಳ್ಳಲಾರದ ಸ್ಥಿತಿಗೆ ತಲುಪಿದ್ದಾನೆ. ತಾನು ಬಯಸಿದಂತೆ, ಹಂಬಲಿಸಿದಂತೆ ಯಾವುದೂ ಆಗುತ್ತಿಲ್ಲ. ಕುಟುಂಬದ ಸಂಬಂಧಗಳು, ಸಾಮಾಜಿಕ ಸಂಬಂಧಗಳು ಎಲ್ಲವೂ ಆತನನ್ನು ಆಗಲು ಬಿಡುತ್ತಿಲ್ಲ ಎಂಬುದೇ ಆತನ ತಕರಾರು. ಬದುಕು–ಸಾವಿನ ಮನೆಯಲ್ಲಿರುವ ನಾಯಕನಿಗೆ ಆಯ್ಕೆ ಯಾವುದು?

'ಮನಸ್ಸಿನ ಹೃದಯದ ಅನಿಸಿಕೆಗಳಿಗೆ ಓಗೊಡದ ಯಾರದೋ ಬಂಧನ, ಯಾವುದೋ ಭಿಡೆಗೊಳಗಾಗಿ ತನ್ನತನವನ್ನು ಅದುಮಿಟ್ಟುಕೊಂಡು; ಯಾರದೋ ನಾಲಿಗೆ, ಯಾವುದೋ ಕಣ್ಣು, ಎಂಥದೋ ಕಿವಿಯಾಗಿ, ಮನುಷ್ಯ ತನ್ನತನವನ್ನು ಹಂಚಿಕೊಂಡು ಬಾಳುವವರ ಘಟಕವಾದ ಈ ಜಗತ್ತು, ಸಮಾಜ ನನ್ನ ಪಾಲಿಗಂತೂ ಎಂದೋ ಸತ್ತಂತಾಗಿಬಿಟ್ಟಿದೆ. ಅದಕ್ಕೆ ಈ ಸತ್ತ ಜನಜಂಗುಳಿಯಲ್ಲಿ ಬದುಕಿರುವುದಕ್ಕಿಂತ, ಮುಂದೆ ಬದುಕಿರುವ ಸಮಾಜ ನಿರ್ಮಿಸಲು ಸಾಯುವುದೇ